

# ನಗುತ್ತಿರುವ ಮೂರ್ತಿಗಳು!

‘ನಗುವುದು ಸಹಜ ಧರ್ಮ, ಅನ್ಯರನ್ನು ನಗಿಸುವುದು ಪರಧರ್ಮ..’ ಎಂದು ಡಿ.ವಿ.ಜಿ ಯವರು ನುಡಿದಿದ್ದಾರೆ. ಇತ್ತೀಚಿನ ದಿನಗಳಲ್ಲಿ ನಮ್ಮೆಲ್ಲರ ಜೀವನದಿಂದ ನಗು ಮಾಯವಾಗುತ್ತಿದೆ. ಒತ್ತಡದ ಬದುಕು ಹಾಗೂ ಸುತ್ತಮುತ್ತಲಿನ ಪರಿಸರ ಇದಕ್ಕೆ ಕಾರಣವಿರಬಹುದು. ಕೆನಡಾದ ವ್ಯಾಂಕೋವರ್ ನಲ್ಲಿರುವ ಮಾರ್ಟನ್ ಪಾರ್ಕ್‌ಗೆ ನೀವು ಭೇಟಿ ನೀಡಿದರೆ ನಿಮ್ಮ ಮುಖದಲ್ಲಿ ಮಂದಹಾಸ ಮೂಡದೇ ಇರದು! ಇಲ್ಲಿ ಹುಚ್ಚು ಹಿಡಿದಿರುವಂತೆ ಗಹಗಹಿಸಿ ನಗುತ್ತಿರುವ 14 ಬೃಹತ್ ಕಂಚಿನ ಮೂರ್ತಿಗಳ ಸಂಗ್ರಹವಿದೆ. ಅಂತರಾಷ್ಟ್ರೀಯ ಸಮಕಾಲಿನ ಕಲಾ ಕೃತಿಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಪ್ರದರ್ಶಿಸುವ ವ್ಯಾಂಕೋವರ್ ಇಂಟರ್ ನ್ಯಾಷನಲ್ ಸ್ಕಲ್ಪ್ಚರ್ ಬಿನ್ನೇಲ್‌ನ ಭಾಗವಾಗಿ ಇವುಗಳನ್ನು 2009 ರಲ್ಲಿ ಸ್ಥಾಪಿಸಲಾಗಿದೆ. ‘ಅಮೇಜಿಂಗ್ ಲಾಫ್ಟರ್’ ಎಂದು ಕರೆಯಲ್ಪಡುವ ಇದು ನಗರದ ಅತ್ಯಂತ ಜನಪ್ರಿಯ ಸಾರ್ವಜನಿಕ ಕಲೆಯ ಪ್ರದರ್ಶನವಾಗಿದೆ.

ಇದನ್ನು ವಿನ್ಯಾಸ ಮಾಡಿದ್ದು ಯ್ಯೂ ಮಿನ್ಜುನ್ ಎಂಬ ಕಲಾವಿದ. ಈತ 1990 ರಲ್ಲಿ ಚೀನಾದಲ್ಲಿ ಆರಂಭವಾದ ಸಿನಿಕಲ್ ರಿಯಾಲಿಸಮ್ ಎನ್ನುವ ಕಲಾ ಆಂದೋಲನದಲ್ಲಿ ಮುಂಚೂಣಿಯ ಪಾತ್ರ ವಹಿಸಿದ್ದ.



ಮೂರು ಮೀಟರ್‌ನಷ್ಟು ಎತ್ತರವಾಗಿರುವ ಈ ಚಿತ್ರಗಳು ಅತಿಶಯವಾದ ಗಾತ್ರದಲ್ಲಿದ್ದು ಎಲ್ಲಾ ದಂತಗಳು ತೋರುವ ಹಾಗೆ ಹಲ್ಲುಕಿರಿಯುತ್ತಿರುವ ಕಲಾವಿದನ ಸ್ವಂತ ಚಿತ್ರವನ್ನು ಬಿಂಬಿಸುತ್ತಿವೆ. ಸಂತೋಷ ಹಾಗೂ ಉಲ್ಲಾಸವನ್ನು ಉಂಟು ಮಾಡುವ ನಗುವನ್ನು ಎಲ್ಲಾ ಜನರು ಅನುಭವಿಸಲು ಈ ಕೆತ್ತನೆ ಸ್ಫೂರ್ತಿಯಾಗಲಿ ಎಂಬ ವ್ಯಾಖ್ಯಾನವನ್ನು ಈ ಪಾರ್ಕ್‌ನಲ್ಲಿರುವ ಸಿಮೆಂಟ್ ಆಸನದ ಮೇಲೆ ಕೆತ್ತಲಾಗಿದೆ. ಕಲಾವಿದ ಹಾಗೂ ಬಿನ್ನೇಲ್ ನ ನಡುವಿನ ಒಪ್ಪಂದದ ಪ್ರಕಾರ ‘ಅಮೇಜಿಂಗ್ ಲಾಫ್ಟರ್’ ನ ಪ್ರದರ್ಶನ 2011 ಡಿಸೆಂಬರ್ 31 ಮುಕ್ತಾಯವಾಗಬೇಕಿತ್ತು. ಆದರೆ ನಗರದ ಜನರು ಇದನ್ನು ಸ್ಥಳಾಂತರಿಸಲು ಬಿಲ್ ಕುಲ್ ಒಪ್ಪಲಿಲ್ಲ. ಖಾಸಗಿ ಸಂಸ್ಥೆಯೊಂದು ಕಲಾವಿದನಿಗೆ ಹಣ ನೀಡಿ, ಅದನ್ನು ವ್ಯಾಂಕೋವರ್ ನಗರಕ್ಕೆ ಕೊಡುಗೆಯನ್ನಾಗಿ ನೀಡಿತು. ನಗುತ್ತಿರುವ ಈ ಪುತ್ಥಳಿಗಳು ಪಾರ್ಕ್‌ನ ಸೊಬಗನ್ನು ಹೆಚ್ಚಿಸಿರುವುದರ ಜೊತೆಗೆ ನೋಡುಗರ ಮೊಗದಲ್ಲಿ ನಗುವನ್ನು ಅರಳಿಸುತ್ತಿವೆ.

■ **ವಿದ್ಯಾ ವಿ. ಹಾಲಭಾವಿ**